158

ಮೈಸೂರ ಗಿಜಿಟ.

ಸಂ. XXXI. ಸರ್ಕಾರದಿಂದ ಘಾಯಿಷ್ ಆದ್ದು. [ನಂ. 37.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 17, ಸ್ಟ 1896.

IIನೇ ಭಾಗ.

ಇಂಡ್ಯಗೆವರ್ನಮೆಂಟ್, ರೆಸಿಡೆಂಟರು, ಜೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮಿಗಳು.

ನಂದೀದುರ್ಗದ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಟ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 44.

ಮೃತಪಟ್ಟ ಚಿಕ್ಕಹನುಮಂತಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಅಕ್ಕೀಪೇಟೆಗೆ ಕೇರಿದ ರಾಜೇವಾರ್ ಪೇಟೆಯಲ್ಲಿ ಇರುವ ಹನುಮಯ್ಯನು, ಮೃತಪಟ್ಟ ಸದರೀ ಚಿಕ್ಕ ಹನುಮಂತಪ್ಪನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಅಕ್ಕೀಪೇಟೆಗೆ ಕೇರಿದ ರಾಜೇವಾರ್ ಪೇಟೇ ಸ್ಥಳದ ಹನುಮಯ್ಯನು, ರಾಜೇವಾರ್ ಪೇಟೇ ವಾಸಸ್ಥರಾಗಿ ಮೃತಪಟ್ಟ ಚಿಕ್ಕಹನುಮಂತಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ಟ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹನುಮಯ್ಯನವರ ಅರ್ಜಿಯನ್ನು ಸ್ಟ 1896ನೇ ಇಸವಿ ನವಂಬರ್ ತಿಂಗಳ ತಾರೀಖು ೨೮ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲವಲ್ಲಿ ಸದರೀ ಮೃತಪಟ್ಟ ಚಿಕ್ಕಹನುಮಂತಪ್ಪನವರ ಆಸ್ತಿಗೆ ಹಕ್ಕುದಾರರಾದವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇವರಿಂದ ತಿಳಿಯಪಡಿಸಿ ಇದೆ.

ಸ್ಟ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 46.

ಮೃತಪಟ್ಟ ಯಲೇ ಚನ್ನಬಸಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ತುಮಕೂರಲ್ಲಿಇರುವ ಯಲೇ ವಿರುಪಾಕ್ಷಯ್ಯನು, ಮೃಪಟ್ಟ ಸದರೀ ಯಲೇ ಚನ್ನಬಸಪ್ಪನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ತುಮಕೂರು ಸ್ಥಳದ ಯಲೇ ವಿರುಪಾಕ್ಷಯ್ಯನು, ತುಮಕೂರು ವಾಸಸ್ಥರಾಗಿ ಮೃತಪಟ್ಟ ಯಲೇ ಚನ್ನಬಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ಟ 1860ನೇ ಇಸವಿ 27ನೇ ಆಕ್ಟ್ಯುಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಯಲೇ ವಿರುಪಾಪ್ಪಯ್ಯನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ನವಂಬರ್ ತಿಂಗಳ ತಾರೀಖು ೫ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಯಲೇ ಚನ್ನಬಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 47.

ಮೃತಪಟ್ಟ ಚಿಕ್ಕಬಚ್ಚಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ತಾಲ್ಲೂಕು ಬಯ್ಯಪ್ಪನಹಳ್ಳಿಯಲ್ಲಿ ಇರುವ ವೆಂಕಟರಮಣಪ್ಪನು, ಮೃತಪಟ್ಟ ಸದರೀ ಚಿಕ್ಕಬಚ್ಚಪ್ಪನು ಬರದಿಟ್ಟ ವಿಲ್ಲಿನ ಎಗ್ಜಿಕ್ಯೂಟರು ಆಗಬೇಕೆಂಬ ಹಕ್ಕುದಾರಿ ಮೇಲೆ ಬಯ್ಯಪ್ಪನಹಳ್ಳಿ ಸ್ಥಳದ ವೆಂಕಟರಮಣಪ್ಪನು, ಬಯ್ಯಪ್ಪನ ಹಳ್ಳಿ ವಾಸಸ್ಥರಾಗಿ ಮೃತಪಟ್ಟ ಚಿಕ್ಕಬಚ್ಚಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಮಣಪ್ಪನ ಅರ್ಜಿಯನ್ನು 1896ನೇ ಇಸವಿ ನವಂಬರ್ ತಿಂಗಳ ತಾರೀಖು ೫ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಬಚ್ಚಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ಸೆಪ್ಟಂಬರ್ ತಿಂಗಳ 3ನೇ ತಾರೀಖಿನಲ್ಲಿ ಕೋರ್ಟ್ ವೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾಗುವ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಆವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವೆಂಬರ್ 1896.
ಡಿಟೋ	ಶ್ರೀರಂಗಪಟ್ಟಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯುರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ಪಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿದೆ.